ಪಿಡಬ್ಲೂ – 3

<u>ದಿನಾಂಕಃ 18.10.2019 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು</u>

<u>ಪಾಟೀ ಸವಾಲುಃ ಶ್ರೀ ಆರ್ ಕೆ ವಕೀಲರಿಂದ</u>

ನನಗೆ ಈಗ 76 ವರ್ಷ ವಯಸ್ಸಾಗಿರುತ್ತದೆ. ನನಗೆ 15–18 ವಶಷ ವಯಸ್ಸು ಇದ್ದಾಗ ಮೂಕಾಂಬಿಕ ರವರ ಮದುವೆ ಆಗಿರಬಹುದು. ಯಾವ ಇಸವಿಯಲ್ಲಿ ಮದುವೆ ಆಗಿತ್ತು ಎಂಬುದು ನನಗೆ ನಿಖರವಾಗಿ ಹೇಳಲು ಆಗುವುದಿಲ್ಲ. ಮದುವೆಯ ಮಾತುಕತೆಯಲ್ಲಿ ನಾನು ಭಾಗವಹಿಸಿರಲಿಲ್ಲ. ಸದರಿ ಮೂಕಾಂಬಿಕರವರ ಸ್ವಂತ ಊರಾದ ಹೆಬ್ಬಿಗೆ ಗ್ರಾಮದ ಪುರ ಎಂಬಲ್ಲಿ ಸದರಿ ಮೂಕಂಬಿಕರವರ ಮದುವೆಯಾಗಿದ್ದು ನಾನು ಸದರಿ ಮದುವೆಯಲ್ಲಿ ಭಾಗವಹಿಸಿದ್ದೇನು. ನಾನು ಅ ರೀತಿ ಯಾವುದೇ ಮದುವೆಗೆ

ಹೋಗಿರಲಿಲ್ಲ ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಮದುವೆಗೆ ಹೋಗಿದ್ದೇನು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನನಗೆ ಒಂದೂವರೆ ಎಕರೆ ಅಡಿಕೆ ತೋಟ ಇರುತ್ತದೆ. ವಾದಿಗಳ ಅಜ್ಜ ದೇವರಬೆಟ್ಟರವರಿಗೆ ಒಂದುರಾವರೆ ಎಕರೆ ಅಡಿಕೆ ತೋಟ ಇರುತ್ತದೆ. ಸದರಿಯವರಿಗೆ ಒಬ್ಬ ಗಂಡು ಮಗ ಹಾಗೂ ಒಬ್ಬಳು ಮಗಳು ಇರುತ್ತಾರೆ. ದೇವರಬೆಟ್ಟರವರ ಮೊಮ್ಮಕ್ಕಳು ಇರುತ್ತಾರೆ. ಅವರುಗಳ ಪೈಕಿ ಕೆಲವರು ಪುರ ಗ್ರಾಮದಲ್ಲಿ ಕೆಲವರು ಬಿಚ್ಚಗೋಡು ಗ್ರಾಮದಲ್ಲಿ ಇರುತ್ತಾರೆ. ದೇವರಬೆಟ್ಟರವರಿಗೆ 5 ಜನ ಮೊಮ್ಮಕ್ಕಳು ಇರುತ್ತಾರೆ.

ನನಗೂ ಹಾಗೂ ಈಶ್ವರಭಟ್ಟರಿಗೂ ಭಿನ್ನಾಬಿಪ್ರಾಯ ಇತ್ತು ಎಂದರೆ ಸರಿಯಲ್ಲ. ಮೂಕಂಬಿಕರವರನ್ನು ಹಲ್ಲಕೆರೆ ಗ್ರಾಮದ ಸುಬ್ಬರಾವ್ ಎಂಬುವವರಿಗೆ ಕೊಟ್ಟು ಮದುವೆ ಮಾಡಲಾಗಿತ್ತು. ಮದುವೆಯ ನಂತರ ಸುಬ್ಬರಾವ್ ಹಾಗೂ ಮೂಕಂಬಿಕರವರು ಸಾಗರ ನಗರದಲ್ಲಿ ವಾಸಮಾಡಿಕೊಂಡಿದ್ದರು. ಸುಬ್ಬರಾವ್ ರವರು ಸಾಗರದಲ್ಲಿ ಕ್ಯಾಂಟಿನು ನಡೆಸುತ್ತಿದ್ದರು. ಯಾವ ವರ್ಷದಲ್ಲಿ ಅವರು ಕ್ಯಾಂಟಿನ್ ಪ್ರಾರಂಬಿಸಿದ್ದರು ಎಂದರೆ ಸಾಕ್ಷಿ ಮದುವೆಯ ನಂತರ ಪ್ರಾರಂಬಿಸಿದ್ದರು ಎಂದು ನುಡಿಯುತ್ತಾರೆ. ಅ ರೀತಿ ಅವರು ಗಣಪತಿ ದೇವಸ್ಥಾನದ ಬಳಿ ಕ್ಯಾಂಟಿನು ನಡೆಸುತ್ತಿದ್ದರು. ನಾವು ಸಾಗರಕ್ಕೆ ಬಂದರೆ ಅದೇ ಕ್ಯಾಂಟಿನಿಗೆ ಹೋಗುತ್ತಿದ್ದೇವು ಮತ್ತು ಅಲ್ಲಿಯೇ ತಿಂಡಿ ತಿಂದು ಅಲ್ಲಿಯೇ ಉಳಿದುಕೊಂಡು ಶುಲ್ಕವನ್ನು ಪಾವತಿಸುತ್ತಿದ್ದೇವು. ಸದರಿ ಕ್ಯಾಂಟಿನಿನ ಆದಾಯ ಸುಬ್ಬರಾವ್ ರವರ ಜೀವನದ ಖರ್ಚಿಗೆ ಸಾಕಾಗುತ್ತಿತ್ತು. ಆ ಸಮಯದಲ್ಲಿ ಸುಬ್ಬರಾವ್ ರವರ ಹೆಂಡತಿ ಮಕ್ಕಳು ಸಹ ಅವರೊಂದಿಗೆ ವಾಸ ಮಾಡಿಕೊಂಡಿದ್ದರು. ಅವರು ಎಷ್ಟನೇ ಇಸವಿಯವರೆಗೆ ಕ್ಯಾಂಟಿನು ನಡೆಸಿದ್ದರು ಎಂಬುದು ನನಗೆ ನೆನಪಿಲ್ಲ.

ಸುಬ್ಬರಾವ್ ರವರು ಯಾವ ಇಸವಿಯಲ್ಲಿ ಜಮೀನು ಖರೀದಿಸಿದ್ದರು ಎಂದರೆ ಸಾಕ್ಷಿ ಮೂಕಂಬಿಕರವರು ಜಮೀನು ಖರೀದಿಸಿದ್ದರು ಆದರೆ ಯಾವ ಇಸವಿಯಲ್ಲಿ ಖರೀದಿಸಿದ್ದರು ಎಂಬುದು ನನಗೆ ನೆನಪಿಲ್ಲ. ಸದರಿ ಖರೀದಿಯ ಕ್ರಯ ಪತ್ರಕ್ಕೆ ನಾನು ಸಾಕ್ಷಿದಾರನಾಗಿರಲಿಲ್ಲ. ಸಾಕ್ಷಿ ಮುಂದುವರೆದು ಕ್ರಯ ಪತ್ರ ಆಗುವ ಸಮಯದಲ್ಲಿ ನಾನು ಸಹ ಹಾಜರಿದ್ದೆನು ಎಂದು ನುಡಿಯುತ್ತಾರೆ. ಖರೀದಿಯ ಮಾತುಕತೆಯಲ್ಲಿ ನಾನು ಭಾಗವಹಿಸಿರಲಿಲ್ಲ. ಕ್ರಯ ಪತ್ರದ ಸಮಯದಲ್ಲಿ ಹಲವಾರು ಜನರು ಇದ್ದರು ಯಾರು ಯಾರು ಇದ್ದರು ಎಂಬುದು ನನಗೆ ಈಗ ನೆನಪಿಲ್ಲ. ಕ್ರಯ ಪತ್ರಕ್ಕೆ ದೇವರಭಟ್ಟರು ಸಾಕ್ಷಿಯಾಗಿ ಸಹಿ ಮಾಡಿದ್ದರೋ ಇಲ್ಲವೋ ನನಗೆ ಗೊತ್ತಿಲ್ಲ. ಕ್ರಯ ಪತ್ರಕ್ಕೆ ಸಾಕ್ಷಿ ದಾರರಾಗಿ ಯಾರು ಯಾರು ಸಹಿ ಮಾಡಿದ್ದರು ಎಂಬುದು ನನಗೆ ನೆನಪಿಲ್ಲ ಮೂಕಾಂಬಿಕರವರು ಯಾರಿಂದ ಆಸ್ತಿಯನ್ನು ಖರೀದಿ ಮಾಡಿದ್ದರು ಎಂಬುದು ನನಗೆ ಗೊತ್ತಿಲ್ಲ. ಖರೀದಿ ದಿನದಂದು ನಾವು ಬೆಳಿಗ್ಗೆ 10.30 ಗಂಟೆಗೆ ನೊಂದಾಧಿಕಾರಿಗಳ ಕಛೇರಿಗೆ ಹೋಗಿದ್ದೇವು. ಕ್ರಯ ಪತ್ರವು ಮದ್ಯಾಹ್ನ 2 ಗಂಟೆಯ ಹೊತ್ತಿಗೆ ನೊಂದಣಿ ಅಗಿರಬಹುದು. ಕ್ರಯದ ಮೊದಲು ಕ್ರಯದ ಬಗ್ಗೆ ಮಾತುಕತೆ ಆಗಿತ್ತು. ಆ ಸಮಯದಲ್ಲಿ ನಾನು ಇರಲಿಲ್ಲ. ಅ ಸಮಯದಲ್ಲಿ ಏನೂ ಮಾತುಕತೆ ಆಗಿತ್ತು ಎಂಬುದು ಸಹ ನನಗೆ ಗೊತ್ತಿಲ್ಲ. ಕ್ರಯ ಪತ್ರ ನೊಂದಣಿ ಸಮಯದಲ್ಲಿ ಸುಬ್ಬರಾವ್ ರವರು ಸಹ ಇದ್ದರು.

ದೇವರಭಟ್ಟರು 35-40 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಈಶ್ವರಭಟ್ಟರು 1975-80 ರ ನಡುವೆ ತೀರಿಕೊಂಡಿರುತ್ತಾರೆ ಎಂದರೆ ಸಾಕ್ಷಿ ಇರಬಹುದು ಎಂದು ನುಡಿಯುತ್ತಾರೆ. ಈಶ್ವರಭಟ್ಟರು ಮೊದಲು ತೀರಿಕೊಂಡಿರುತ್ತಾರೋ ಅಥವಾ ಅವರ

ತಂದೆ ಮೊದಲು ತೀರಿಕೊಂಡಿರುತ್ತಾರೋ ಅಂದರೆ ಸಾಕ್ಷಿ ತಂದೆಯೇ ಮೊದಲು ತೀರಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ.

ಮೂಕಂಬಿಕರವರು ಖರೀದಿ ಮಾಡಿದ್ದರು ಎಂದು ಹೇಳಲಾದ ಜಮೀನಿನ ಬಳಿ ನಾನು ಹೋಗಿದ್ದೇನು ಆದರೆ ಅದರ ಸ.ನಂ ನನಗೆ ಹೇಳಲು ಆಗುವುದಿಲ್ಲ. ಸುಬ್ಬರಾಯರು ನನ್ನ ಆತ್ಮೀಯರು ಎಂದರೆ ಸರಿ. ಆಸ್ತಿಯ ಖರೀದಿ ಬಗ್ಗೆ ದೇವರಭಟ್ಟರು ನನ್ನ ಬಳಿ ಹೇಳಿದ್ದರು. ಎಷ್ಟು ಮೊತ್ತಕ್ಕೆ ಆಸ್ತಿಯನ್ನು ಖರೀದಿ ಮಾಡಿದ್ದರು ಎಂಬುದು ನನಗೆ ಗೊತ್ತಿಲ್ಲ. ಆ ಸಮಯದಲ್ಲಿ ನನಗೆ 18-20 ವರ್ಷ ವಯಸ್ಸು ಆಗಿರಬಹುದು. ನನ್ನ ತಂದೆ ಈಗ್ಗೆ 20 ವರ್ಷಗಳ ಹಿಂದೆ ತೀರಿಕೊಂಡಿರುತ್ತಾರೆ. ಕ್ರಯ ಪತ್ರ ಆದ ಸುವಯದಲ್ಲಿ ನಾನು ಭಾಗವಹಿಸಿರಲಿಲ್ಲ ಮತ್ತು ವ್ಯವಹಾರಕ್ಕೆ ಸಂಬಂದಪಟ್ಟಂತೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯ ಪ್ರಮಣ ಪತ್ರದಲ್ಲಿ ಕ್ರಯದ ಮೊಬಲಗನ್ನು ದೇವರಭಟ್ಟರು ಕೊಟ್ಟಿದ್ದರು ಎಂದು ಸುಳ್ಳು ಬರವಣಿಗೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಕ್ರಯದ ಮೊಬಲಗನ್ನು ಸುಬ್ಬರಾಯರೇ ಪಾವತಿ ಮಾಡಿದ್ದರು ಎಂದರೆ ಸರಿಯಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದಿದ್ದರೂ ಸಹ ವಾದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೇವರಭಟ್ಟರಿಗೆ ಕಾಡುಭಟ್ಟರು ಎಂದು ಸಹ ಕರೆಯುತ್ತಾರೆ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಹೆಚ್ಚುವರಿ ಜೆಎಂಎಫ್‌ಸಿ, ಸಾಗರ